ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 8992/2022

ಸಿ.ಡಬ್ಲ್ಯೂ -08
ಪಿ.ಡಬ್ಲ್ಯೂ-05

ಸಾಕ್ಷಿದಾರನ ಹೆಸರು :- ಎನ್.ಎ ಕೃಷ್ಣಪ್ಪ
ತಂದೆಯ ಹೆಸರು :- ಅಪ್ಪಾಜಯ್ಯ
ವಯಸ್ಸು :- 53 ವರ್ಷ
ಉದ್ಯೋಗ :- ಪಿ.ಡಿ.ಓ
ವಾಸ :- ಕೆ. ಹೊನ್ನಮಾಚನಹಳ್ಳಿ

**ಸಾಕ್ಷಿಗೆ ದಿಃ 06.04.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

2020 ರಿಂದ 2022ರವರೆಗೆ ಹಳೆವೂರು ಗ್ರಾ. ಪಂಚಾಯಿತಿಯಲ್ಲಿ ಪಿ.ಡಿ.ಓ ಆಗಿ ಸೇವೆ ಸಲ್ಲಿಸಿರುತ್ತೇನೆ.

ದಿಃ 12.07.2022 ರಂದು ಹು.ದುರ್ಗ ಪೊ.ಠಾಣೆಯಿಂದ ಬಿಚನಹಳ್ಳಿ ಗ್ರಾಮದ ಖಾತಾ ನಂ 117/162 ಖಾತ ನಕಲನ್ನು ಕೋರಿ ಪತ್ರ ಬಂದಿದ್ದು ಅದೇ ದಿನ ನಾನು ಕವರಿಂಗ್ ಲೇಟ್‌ರ್ ನೊಂದಿಗೆ ಖಾತಾ ಎಕ್ಸಟ್ರಾಕ್ಟ‌ಅನ್ನು ನೀಡಿರುತ್ತೇನೆ. ಅದಕ್ಕೆ ನನ್ನ ಸಹಿ ಇರುತ್ತದೆ ಸದರಿ ಖಾತೆ ಚಾಸಾ 2 ಅವರ ಹೆಸರಿಗೆ ಇರುತ್ತದೆ. ಸದರಿ ವರದಿ ಮತ್ತು ಖಾತಾ ಎಕ್ಸಟ್ರಾಕ್ಟ ಅನ್ನು ನಿ.ಪಿ 5 ಮತ್ತು 6 ಎಂದು ಸಹಿ ನಿ.ಪಿ 5(ಎ) ಮತ್ತು 6 (ಎ) ಎಂದು ಗುರುತಿಸಲಾಯಿತು.

**ಆರೋಪಿಗಳ ಪರ ಪಾಟೀ ಸವಾಲುಃ ಜಿ.ಆರ್.ಕೆ. ವಕೀಲರಿಂದಃ**

ದಿಃ 12.07.2022 ರಂದು ಬೆಳಿಗ್ಗೆ 10.30 ರಿಂದ 11 ಗಂಟೆಯ ಸಮಯದಲ್ಲಿ ಹು.ದುರ್ಗ ಪೊ. ಠಾಣೆಯಿಂದ ಪತ್ರ ಬಂದಿರುತ್ತದೆ. ಸದರಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ತಂದಿರುವುದಿಲ್ಲ. ನಾನು ಟ್ಯಾಕ್ಸ ಕಟ್ಟಿಸಿಕೊಳ್ಳುವ ಕೆಲಸ ಮಾಡುವುದಿಲ್ಲ. ನಾನು 1 ರಿಂದ 1.30ರ ಸಮಯದಲ್ಲಿ ಖಾತಾ ಎಕ್ಸಟ್ರಾಕ್ಟ ಅನ್ನು ನೀಡಿರುತ್ತೇನೆ.

ಪೋಲಿಸರು ಖಾತಾ ಎಕ್ಸಟ್ರಾಕ್ಟ ಅನ್ನು ಕೇಳಿದ್ದು ನಾನು ಡಿಮ್ಯಾಂಡ ರಜಿಸ್ಟರ ಎಕ್ಸಟ್ರಾಕ್ಟಅನ್ನು ನೀಡಿರುತ್ತೇನೆ. ನಿ.ಪಿ 6 ರಲ್ಲಿ ಚಕ್ಕುಬಂದಿ ಮತ್ತು ವಿಸ್ತಿರ್ಣ ನಮೂದು ಇರುವುದಿಲ್ಲವೆಂದರೆ ಸರಿ. ಫಾರಂ ನಂ 9 ಅನ್ನು ನೀಡಲು ತೊಂದರೆ ಇರಲಿಲ್ಲವೆಂದರೆ ಸಾಕ್ಷಿ ಪೋಲಿಸರು ಕೇಳಿರುವುದಿಲ್ಲವೆಂದು ಹೇಳುತ್ತಾರೆ. ಚಾಸಾ 1 ಅವರಿಗೆ ಸಹಾಯ ಮಾಡಲು ನಾನು ದಾಖಲೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್